# INTERNATIONAL WOMEN'S DAY-2026



# GLIMPSES










SJC INSTITUTE OF TECHNOLOGY
International Women's Day 2025
Nivida Award - NCC
TEJASWINI D
1SJ22EC163

# GLIMPSES




SJC INSTITUTE OF TECHNOLOGY


SJC INSTITUTE OF TECHNOLOGY
INTERNATIONAL
Women's Day
2026


SJC INSTITUTE OF TECHNOLOGY
Maa Saraswati Award
Dr.Bhanumathi S



## NEWS PAPER CLIPS

# ಕನ್ನಡಪ್ರಭ

## ಮಹಿಳೆಯರು ಸಬಲೆಯರು ಎಂದು ದೃಢಪಡಿಸಿ

### ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ತಹಸೀಲ್ದಾರ್ ಗಗನಸಿಂಧು ಸಲಹೆ



ನಗರ ಹೊರವಲಯ ಎಸ್‌ಜೆಸಿಐಟಿ ತಾಂತ್ರಿಕ ಕಾಲೇಜು ಆವರಣದ ಸಭಾಂಗಣದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಸಂಸ್ಥೆಯ ಮಹಿಳಾ ಸಾಧಕೀಯರನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಚಿಕ್ಕಬಳ್ಳಾಪುರ

ಸಮಾಜ ಮಹಿಳೆಯರ ಹಕ್ಕುಗಳನ್ನು ರಕ್ಷಿಸಲಿಲ್ಲ ಎಂದರೆ ಅದಕ್ಕೆ ಅರ್ಥವಿರುವುದಿಲ್ಲ, ಸ್ವಾತಂತ್ರ್ಯ ಬಂದು 78 ವರ್ಷವಾದರೂ ಮಹಿಳೆಯರು ಮತ್ತು ಹುಡುಗಿಯರಿಗೆ ಸಂಪೂರ್ಣ ಕಾನೂನು ರಕ್ಷಣೆ ಇಲ್ಲ ಎಂದು ದೂರುವುದಕ್ಕಿಂದ ನಾವು ಅಬಲೆಯರಲ್ಲ ಸಬಲರು ಎಂದು ದೃಢಪಡಿಸಿ ಸಾಗಬೇಕಿದೆ ಎಂದು ಶಿಡ್ಲಘಟ್ಟ ತಹಸೀಲ್ದಾರ್ ಗಗನಸಿಂಧು ತಿಳಿಸಿದರು.

ನಗರ ಹೊರವಲಯ ಎಸ್‌ಜೆಸಿಐಟಿ ತಾಂತ್ರಿಕ ಕಾಲೇಜು ಆವರಣದ ಸಭಾಂಗಣದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಇಂದಿಗೂ ಕೂಡ ಯಾವುದೇ ಕ್ಷೇತ್ರವಿರಲಿ ಅಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಕಬಂಧ ಬಾಹುಗಳು ಬಿಗಿಯಾಗಿರುತ್ತವೆ. ಇದನ್ನು ಬೇಧಿಸಿ ಮುನ್ನಡೆಯುವುದು ಸುಲಭವಲ್ಲ, ಇಂತಹ ವ್ಯವಸ್ಥೆಯ ನಡುವೆಯೂ ಕೂಡ ಅನಾಧಿ ಕಾಲದಿಂದ ಈವರೆಗೆ ಮಹಿಳೆ ಸಾಧಿಸಿರುವ ಸಾಧನೆಗಳು, ಮೂಡಿಸಿರುವ ಹೆಜ್ಜೆ ಗುರುತುಗಳು ಸಾಮಾನ್ಯವಲ್ಲ, ಅವರೇ ಕ್ಷೇತ್ರಗಳಲ್ಲಿ ಇಂತಹ ಅಸಾಮಾನ್ಯ ಸಾಧನೆ ಮಾಡಿರುವ ಹೆಣ್ಣುಮಕ್ಕಳನ್ನು ಆರಿಸಿ ಅಂತ ರಾಷ್ಟ್ರೀಯ ಮಹಿಳಾ ದಿನಾಚರಣೆಯ ನೆಪದಲ್ಲಿ ಇಲ್ಲಿಗೆ ಕರೆಸಿ ಅಭಿನಂದಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಮಹಿಳಾ ಸಾಧಕಿಯರನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಾ ಸರಸ್ವತಿ ಪ್ರಶಸ್ತಿಗೆ ಡಾ.ಭಾನುಮತಿ ಎಸ್, ಮುಖ್ಯಸ್ಥರು, ಮಾಹಿತಿ ತಂತ್ರಜ್ಞಾನ ವಿಭಾಗ ಇವರು ಪಾತ್ರರಾದರು.

ಪ್ರಾಂಶುಪಾಲ ಡಾ.ಜಿ.ಟಿ ರಾಜುಎಲ್ಲಾ ಮಹಿಳಾ ಸಹೋದ್ಯೋಗಿಗಳಿಗೆ ಮಹಿಳಾದಿನಾಚರಣೆಯ ಶುಭಾಷಯ ಕೋರಿದರು. ವಿದ್ಯಾರ್ಥಿನಿಯರಿಂದ ನೃತ್ಯ, ಗಾಯನವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಶಾಂತಿ ನಿಕೇತನ್ ಕಾಲೇಜಿನ ಪ್ರಾಂಶುಪಾಲರಾದ ಭಾರತಿ ಶ್ರೀನಿವಾಸ್, ಪ್ರಿಯದರ್ಶಿನಿ ಗೋಪಾಲ್ ಗೌಡ, ಬೆಂಗಳೂರಿನ ಎಲ್ ಅಂಡ್ ಟಿಯ ಟೆಕ್ನಿಕಲ್ ಮ್ಯಾನೇಜರ್ ಅಂಬು ಜಾಕ್ಷಿ, ಚಿಂತಾಮಣಿಯ ಆರ್.ಕೆ.ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ಕಾರ್ಯದರ್ಶಿ ತನುಶ್ರೀ ರಾಮ್, ಆಡಳಿತಾಧಿಕಾರಿ ರಂಗಸ್ವಾಮಿ.ಜಿ.ಆರ್, ಡೀನ್ ಅಕಾಡೆಮಿಕ್ಸ್ ಮುಖ್ಯಸ್ಥ ಡಾ.ಬಿ.ಎಚ್.ಮಂಜುನಾಥ್ ಕುಮಾರ್, ವಿಭಾಗ ಮುಖ್ಯಸ್ಥರಾದ ಡಾ.ದೀಪ ಎಂ.ಎಸ್, ಡಾ.ಭಾರತಿ ಎಂ ಇದ್ದರು.

KOLAR Edition
Apr 06, 2026 Page No. 03
Powered by: erelego.com

## ಸಮಾಜದ ಪ್ರಗತಿಗೆ ಮಹಿಳೆಯರ ಕೊಡುಗೆ

**ಚಿಕ್ಕಬಳ್ಳಾಪುರ:** ಸಮಾಜದ ಸಮಗ್ರ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಎಸ್‌ಜೆಸಿಐಟಿ ಪ್ರಾಂಶುಪಾಲ ಡಾ. ಜಿ.ಟಿ. ರಾಜು ಹೇಳಿದರು.

ನಗರ ಹೊರವಲಯದ ಎಸ್‌ಜೆಸಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಉದ್ದೇಶಿಸಿ ಅವರು ಮಾತನಾಡಿದರು.

'ಮಹಿಳೆಯರು ಕುಟುಂಬ ವ್ಯವಸ್ಥೆಯಲ್ಲಷ್ಟೇ ಅಲ್ಲದೆ ಶಿಕ್ಷಣ, ಕೃಷಿ, ಆಡಳಿತ, ಉದ್ಯಮ, ವಿಜ್ಞಾನ ಮತ್ತು ಸಾಮಾಜಿಕ ಸೇವೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸಮಾಜದ ಪ್ರಗತಿಗೆ ಮಹತ್ತರ ಕೊಡುಗೆ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿಡ್ಲಘಟ್ಟ ತಹಸೀಲ್ದಾರ್ ಗಗನ ಸಿಂಧು, ಶಾಂತಿನಿಕೇತನ್ ಪಿಯು ಕಾಲೇಜಿನ ಪ್ರಾಂಶುಪಾಲೆ ಭಾರತಿ ಶ್ರೀನಿವಾಸ್, ಎಲ್ ಅಂಡ್ ಟಿ ಟೆಕ್ನಿಕಲ್ ಮ್ಯಾನೇಜರ್ ಪ್ರಿಯದರ್ಶಿನಿ ಗೋಪಾಲ್‌ಗೌಡ, ರೈತ ಮಹಿಳೆ ಅಂಬುಜಾಕ್ಷಿ, ಚಿಂತಾಮಣಿಯ ಆರ್.ಕೆ. ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಕಾರ್ಯದರ್ಶಿ ತನುಶ್ರೀ ರಾಮ್ ಅವರನ್ನು ಸನ್ಮಾನಿಸಲಾಯಿತು. ಮಾ. ಸರಸ್ವತಿ ಪ್ರಶಸ್ತಿಗೆ ಮಾಹಿತಿ ತಂತ್ರಜ್ಞಾನ ವಿಭಾಗ ಮುಖ್ಯಸ್ಥೆ ಡಾ. ಭಾನುಮತಿ ಎಸ್ ಪಾತ್ರರಾದರು. ಇದೇ ಸಂದರ್ಭದಲ್ಲಿ ಆಡಳಿತಾಧಿಕಾರಿ ಆರ್. ರಂಗಸ್ವಾಮಿ, ಡಾ. ಮಂಜುನಾಥ್ ಇದ್ದರು.



ಎಸ್‌ಜೆಸಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಹಿಳಾ ದಿನ ಆಚರಿಸಲಾಯಿತು.